ಹಚ್ಚುವ ಪರ್ಸನಲ್ ಕೇರ್ ಸಾಮಗ್ರಿಗಳು, ಬಟ್ಟೆಬರೆಗಳು, ಮೊಬೈಲ್, ತಂಪು ಪಾನೀಯ, ಆಭರಣಗಳು– ಹೀಗೆ ಎಲ್ಲ ಉತ್ಪನ್ನಗಳಿಗೂ ಈಗ ಸೆಲೆಬ್ರಿಟಿ ರಾಯಭಾರಿಗಳಿದ್ದರೆ ಮಾತ್ರ ಆ ಕಂಪೆನಿಗೆ ಪ್ರತಿಷ್ಠೆ ಎನ್ನುವಂತಾಗಿದೆ.

ಸೆಲೆಬ್ರಿಟಿಗಳು ಜಾಹೀರಾತಿನಲ್ಲಿ ಕಾಣಿಸಿಕೊಂಡರೆ ಆ ಉತ್ಪನ್ನಗಳ ಮಾರಾಟ ಏರುತ್ತದೆಯೆ? ಅಂಕಿ ಅಂಶಗಳ ಪ್ರಕಾರ, ಖಂಡಿತಾ ಏರುತ್ತದೆ. ಸೂಪರ್‌ತಾರೆಯರದ್ದು ಬಿಡಿ, 2015ರಲ್ಲಿ ನೃತ್ಯ ನಿರ್ದೇಶಕಿ ಫರ್‌ಹಾ ಖಾನ್, ಕೆಲವು ಉತ್ಪನ್ನಗಳ ಟೆಲಿವಿಷನ್ ಕಮರ್ಷಿಯಲ್‌ಗಳಲ್ಲಿ ಕಾಣಿಸಿಕೊಂಡಾಗ, ಮೂರೇ ವಾರದಲ್ಲಿ ಆ ಉತ್ಪನ್ನಗಳು ಮಾರುಕಟ್ಟೆಯಲ್ಲಿ 'ನಂಬರ್ ಒನ್' ಆದವು! ಇಲ್ಲಿ ಕುತೂಹಲದ ಸಂಗತಿಯೊಂದಿದೆ. ಸೆಲೆಬ್ರಿಟಿಗಳು ಪ್ರಚಾರ ಮಾಡುವ ಉತ್ಪನ್ನಗಳನ್ನು ಖರೀದಿಸಲು ಆ ಗ್ರಾಹಕ, ಆ ಸೆಲೆಬ್ರಿಟಿಯ ಅಭಿಮಾನಿಯೇ ಆಗಬೇಕಿಲ್ಲ. ಸೆಲೆಬ್ರಿಟಿ ಜಾಹೀರಾತಿನಲ್ಲಿ ಬಂದು ಹೇಳಿದರೆ ಗ್ರಾಹಕನ ಮನಸ್ಸಿನಲ್ಲಿ ಅದು ಅಚ್ಚೊತ್ತಿದಂತೆ ಸದಾ ನೆನಪಿನಲ್ಲಿ ಉಳಿಯುತ್ತದೆ.

ಸಾಮಾಜಿಕ ಜಾಲತಾಣಗಳಂತೂ ಇವತ್ತು ಬ್ರ್ಯಾಂಡ್ ನಿರ್ಮಾಣದ ಕಾರ್ಖಾನೆಗಳಂತಾಗಿವೆ. ಉದಾಹರಣೆಗೆ ವಿರಾಟ್ ಕೊಹ್ಲಿ ಎಂಬ ಕ್ರಿಕೆಟಿಗನನ್ನೇ ತೆಗೆದುಕೊಳ್ಳಿ. ವಿರಾಟ್ ಕೊಹ್ಲಿ ಅಂದರೆ ಇವತ್ತು ಭಾರತಕ್ಕೆ ಕೇವಲ ಕ್ರಿಕೆಟ್ ಆಟಗಾರನಲ್ಲ, ಆತನೊಬ್ಬ ಪವರ್‌ಫುಲ್ ಭಾರತೀಯ ಬ್ರ್ಯಾಂಡ್. 'ಡಫ್ ಎಂಡ್ ಫೆಲ್ಪ್ಸ್' ಕಂಪೆನಿಯ ಸಮೀಕ್ಷೆಯ ಪ್ರಕಾರ, 2017ರ ಕೊನೆಗೆ ವಿರಾಟ್ ಕೊಹ್ಲಿಯ ಬ್ರ್ಯಾಂಡ್ ವ್ಯಾಲ್ಯೂ 144 ದಶಲಕ್ಷ ಅಮೆರಿಕನ್ ಡಾಲರ್! ಭಾರತದ ಬ್ರ್ಯಾಂಡ್ ಮಾರ್ಕೆಟ್‌ನಲ್ಲಿ ಆತನೀಗ 'ನಂಬರ್ ಒನ್' ಬ್ರ್ಯಾಂಡ್!

ನಿನ್ನೆ ಮೊನ್ನೆಯವರೆಗೆ ಈ 'ನಂಬರ್ ಒನ್' ಸ್ಥಾನ ದಲ್ಲಿ ಬಾಲಿವುಡ್ ಸೂಪರ್‌ಸ್ಟಾರ್ ಶಾರೂಕ್ ಖಾನ್ ವಿರಾಜಮಾನನಾಗಿದ್ದ. ಅತ್ತ ಕ್ರಿಕೆಟ್ ಮೈದಾನದಲ್ಲಿ ಕೊಹ್ಲಿ ಒಂದರ ಮೇಲೊಂದು ಸಿಕ್ಸರ್ ಸಿಡಿಸುತ್ತಾ, ವಿಶ್ವದಾಖಲೆಗಳನ್ನು ಪುಡಿಗಟ್ಟುತ್ತಾ ಹೋದಂತೆ, ಇತ್ತ ಬ್ರ್ಯಾಂಡ್ ಮಾರುಕಟ್ಟೆಯಲ್ಲಿ ಆತನ ಸ್ಥಾನಮಾನವೂ ರಾಕೆಟ್ಟಿನಂತೆ ಮೇಲೇರಿದೆ. ಶಾರೂಕ್ ಖಾನ್ ಬ್ರ್ಯಾಂಡ್ ವ್ಯಾಲ್ಯೂ 106 ದಶಲಕ್ಷ ಅಮೆರಿಕನ್ ಡಾಲರ್‌ಅನ್ನೂ ಮೀರಿ ಕೊಹ್ಲಿ ಮುನ್ನುಗ್ಗಿದ್ದಾನೆ. 2017ರಲ್ಲಿ ಬ್ರ್ಯಾಂಡ್ ಪವರ್ ಪಟ್ಟಿಯಲ್ಲಿ ಮೂರನೇ ಸ್ಥಾನಕ್ಕೆ ಏರಿದ ಮೊದಲ ಮಹಿಳೆ ದೀಪಿಕಾ ಪಡುಕೋಣೆ. ಆಕೆಯ ಬ್ರ್ಯಾಂಡ್ ಮೌಲ್ಯ 93 ದಶಲಕ್ಷ ಅಮೆರಿಕನ್ ಡಾಲರ್!

ಕಳೆದ ಐದು ವರ್ಷಗಳಲ್ಲಿ ಭಾರತೀಯ ಸೆಲೆಬ್ರಿಟಿಗಳ ಮೌಲ್ಯ ವರ್ಧನೆಯಲ್ಲಿ ಸಾಕಷ್ಟು ಏರಿಳಿತ ಕಂಡು ಬಂದಿದೆ. ಸಿನಿಮಾ ತಾರೆಯರು ಮತ್ತು ಕ್ರಿಕೆಟ್ ಆಟಗಾರರ ಮಧ್ಯೆ ಅಗ್ರಸ್ಥಾನಗಳಿಗೆ ಭಾರೀ ಪೈಪೋಟಿಯೇ ನಡೆದಿದೆ. 2013ರಲ್ಲಿ ಸೆಲೆಬ್ರಿಟಿಗಳ ಬ್ರ್ಯಾಂಡ್ ಪವರ್ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಇದ್ದಾತ ಮಹೇಂದ್ರ ಸಿಂಗ್ ಧೋನಿ! ನಂತರದ ಸ್ಥಾನದಲ್ಲಿ ಇದ್ದವರು ಸಚಿನ್ ತೆಂಡೂಲ್ಕರ್ ಮತ್ತು ಶಾರೂಕ್ ಖಾನ್. 2014ರಲ್ಲಿ ಧೋನಿ ಅಗ್ರಸ್ಥಾನ ಉಳಿಸಿಕೊಂಡಿದ್ದರೆ, ಎರಡನೇ ಸ್ಥಾನದಲ್ಲಿ ಸಲ್ಮಾನ್ ಖಾನ್ ಬಂದು ಕುಳಿತ. ಶಾರೂಕ್ ಮೂರನೇ ಸ್ಥಾನದಲ್ಲೇ ಇದ್ದ. 2015 ಮತ್ತು 16ರಲ್ಲಿ ಶಾರೂಕ್ ಖಾನ್‌ನದ್ದೇ ಅಗ್ರಸ್ಥಾನ. 2015ರಲ್ಲಿ ಧೋನಿ ಮತ್ತು ಸಚಿನ್ ನಂತರದ ಸ್ಥಾನದಲ್ಲಿದ್ದರು. ಆದರೆ 2016ರಲ್ಲಿ ಅಕ್ಷಯ್ ಕುಮಾರ್ ಎರಡನೇ ಸ್ಥಾನಕ್ಕೆ ಬಂದರೆ, ಸಲ್ಮಾನ್ ಮೂರನೇ ಸ್ಥಾನಕ್ಕೆ ಬಂದ. 2017ರಲ್ಲಿ ಸಿನಿಮಾದವರನ್ನೆಲ್ಲ ಹಿಂದಿಕ್ಕಿದ ವಿರಾಟ್ ಕೊಹ್ಲಿ ಬ್ರ್ಯಾಂಡ್ ಪವರ್ ಪಟ್ಟಿಯ ಅಗ್ರಸ್ಥಾನದಲ್ಲಿದ್ದಾನೆ. ಶಾರೂಕ್ ಮತ್ತು ದೀಪಿಕಾ ನಂತರದ ಸ್ಥಾನದಲ್ಲಿದ್ದಾರೆ.

ಹೀಗೆ ಬ್ರ್ಯಾಂಡ್ ಪವರ್ ಏರಿಳಿತ ಕಾಣಲು ಆಯಾ ಸೀಸನ್‌ನಲ್ಲಿ ಅವರ ಸಿನಿಮಾಗಳ ಯಶಸ್ಸು, ಮೈದಾನದಲ್ಲಿ ನಡೆಸಿದ ದಾಖಲೆಗಳು, ಏರಿದ ಸಂಭಾವನೆ, ಸಾಮಾಜಿಕ ಜಾಲತಾಣಗಳಲ್ಲಿ ಇರುವ ಅನುಯಾಯಿಗಳ ಸಂಖ್ಯೆ– ಎಲ್ಲವೂ ಕಾರಣವಾಗುತ್ತವೆ.

ಇದು ಸಾಮಾಜಿಕ ಜಾಲತಾಣಗಳ ಕಾಲ. ಮೊಬೈಲ್ ಯುಗಕ್ಕೆ ಪ್ರವೇಶಿಸಿದ ಬಳಿಕ ಈಗ ಸ್ಮಾರ್ಟ್‌ಫೋನ್ ಇಲ್ಲದವರು ಗುಗ್ಗುಗಳೆಂದೇ

### ಸೆಲೆಬ್ರಿಟಿಗಳು ಜಾಹೀರಾತಿನಲ್ಲಿ ಕಾಣಿಸಿಕೊಂಡಿರುವ ಉತ್ಪನ್ನಗಳ ಸಂಖ್ಯೆ




